



ರೆಟಿನೊಬ್ಲಾಸ್ಟೊಮಾ ಪುಟಾಣಿಗಳ ಕಣ್ಣುಗಳಲ್ಲಿ ಕಂಡುಬರುವ ಕ್ಯಾನ್ಸರ್‌ಕಾರಕ ಗಡ್ಡೆ. ವಿರಳ ಕಾಯಿಲೆಗಳ ಸಾಲಿಗೆ ಸೇರಿದ್ದ ಇದು ಈಗ ಸಾಮಾನ್ಯ ಸಮಸ್ಯೆಯಾಗಿದೆ. ಐದು ವರ್ಷದೊಳಗಿನ ಮಕ್ಕಳು ಈ ಕಾಯಿಲೆಯಿಂದ ಹೆಚ್ಚು ಬಳಲುತ್ತಿದ್ದಾರೆ.

■ ಉಮಾ ಅನಂತ್

# ರೆಟಿನೊಬ್ಲಾಸ್ಟೊಮಾ

## ಪುಟಾಣಿ ಕಣ್ಣುಗಳಿಗೆ ಕಂಟಕ

ಅದಿನ್ನೂ ಹಾಲುಗಲ್ಲದ ಹಸುಳೆ. ಭೂಮಿಗೆ ಬಂದು ಕಣ್ಣು ಬಿಟ್ಟು ವಾರವಾಗಿಲ್ಲ. ಮಗುವನ್ನು ನೋಡಲು ಬಂದ ನೆಂಟರೊಬ್ಬರು ಅದರ ಕಣ್ಣುಗಳನ್ನು ನೋಡಿ 'ಇದೇನು ಮಗುವಿನ ಕಣ್ಣುಗುಡ್ಡೆಗಳು ಬೆಳ್ಳಗಿವೆಯಲ್ಲಾ...' ಎಂದಿದ್ದೇ ತಡ, ಮನೆಯವರಿಗೆಲ್ಲ ಆತಂಕ. ತಕ್ಷಣವೇ ತಜ್ಞ ನೇತ್ರವೈದ್ಯರನ್ನು ಕಂಡ ಹೆತ್ತವರಿಗೆ ಮತ್ತೊಂದು ಆಘಾತ ಕಾದಿತ್ತು. ಅದುವೇ ನವಜಾತ ಶಿಶುವಿಗೆ ಕಣ್ಣಿನ ಕ್ಯಾನ್ಸರ್ ಇರುವ ಕಹಿಸತ್ಯ!. ತೀರಾ ಆರಂಭಿಕ ಹಂತದಲ್ಲಿದ್ದ ಕಾರಣ ಲೇಸರ್ ಥೆರಪಿ ಮೂಲಕ ಮಗುವಿನ ಕಣ್ಣುಗಳಲ್ಲಿನ ಕ್ಯಾನ್ಸರ್‌ಕಾರಕ ಕಣಗಳನ್ನು ತೆಗೆದುಹಾಕಲಾಯಿತು. ಕೆಲ ದಿನಗಳಲ್ಲೇ ಚೇತರಿಸಿಕೊಂಡ ಮಗು ಲವಲವಿಕೆಯಿಂದ ತಾಯಿ ಜೊತೆ ಕೇಕೆ ಹಾಕಲಾರಂಭಿಸಿತು. ಇದು ಕಣ್ಣುಗಳ ಕ್ಯಾನ್ಸರ್ (ರೆಟಿನೊಬ್ಲಾಸ್ಟೊಮಾ) ಎಂಬ ಕಾಯಿಲೆಯ ಕಥೆ.

ನವಜಾತ ಶಿಶುಗಳಲ್ಲಿ ಮತ್ತು ಮಕ್ಕಳ ಕಣ್ಣುಗಳ ರೆಟಿನಾದಲ್ಲಿ ಇತ್ತೀಚೆಗೆ ಕ್ಯಾನ್ಸರ್ ಗಡ್ಡೆ ಹೆಚ್ಚಾಗಿ ಕಂಡುಬರುತ್ತಿದೆ. ಅದರಲ್ಲೂ ಐದು ವರ್ಷದ ಮಕ್ಕಳವರೆಗೆ ಇತ್ತೀಚೆಗೆ ಕಣ್ಣಿನ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ.

**ಫೆಬ್ರುವರಿ 4**
**ವಿಶ್ವ ಕ್ಯಾನ್ಸರ್ ದಿನ**

'ರೆಟಿನೊಬ್ಲಾಸ್ಟೊಮಾ' ಎನ್ನಲಾಗುವ ಈ ಕಾಯಿಲೆಯನ್ನು ಆರಂಭದಲ್ಲೇ ಗುಣಪಡಿಸದಿದ್ದರೆ ಮಕ್ಕಳು ಶಾಶ್ವತವಾಗಿ ಕಣ್ಣು ಕಳೆದುಕೊಳ್ಳುವ ಅಪಾಯವಿದೆ.

ಪುಟಾಣಿಗಳ ಕಣ್ಣುಗಳಲ್ಲಿ ಕಂಡುಬರುವ ಕ್ಯಾನ್ಸರ್‌ಕಾರಕ ಗಡ್ಡೆ ಮೊದಲೆಲ್ಲ ವಿರಳ ಕಾಯಿಲೆಗಳ ಸಾಲಿಗೆ ಸೇರಿತ್ತು. ಆದರೆ ಈಗ ಇದು ಸಾಮಾನ್ಯ ಕಾಯಿಲೆಯಾಗಿದ್ದು, ತಾಯಿ ಗರ್ಭದಲ್ಲಿರುವಾಗಲೂ, ಆಗ ತಾನೇ ಹುಟ್ಟಿದ ಮಕ್ಕಳೂ ಸೇರಿದಂತೆ ವಿಶ್ವದಾದ್ಯಂತ ಐದು ವರ್ಷದೊಳಗಿನ ಅನೇಕ ಮಕ್ಕಳು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕಣ್ಣುಗಳ ರೆಟಿನಾದಲ್ಲಿ ಹುಟ್ಟಿಕೊಳ್ಳುವ ಕ್ಯಾನ್ಸರ್ ಗಡ್ಡೆಗಳು, ಕಣ್ಣುಗಳ ಒಳಗಿನ ಅಂಗಾಂಶಗಳನ್ನು ನಾಶಪಡಿಸುವುದಲ್ಲದೆ ದೇಹದ ಇತರ ಭಾಗಗಳಿಗೂ ಹರಡುತ್ತದೆ. ಇದು ಆತಂಕದ ವಿಚಾರ. ಕ್ಯಾನ್ಸರ್‌ನ ಆರಂಭಿಕ ಹಂತದಲ್ಲಿ ಇದನ್ನು ಗುಣಪಡಿಸಬಹುದು. ಆದರೆ ರೋಗಪತ್ತೆ ನಿಧಾನವಾದರೆ ರೆಟಿನೊಬ್ಲಾಸ್ಟೊಮಾ ಜೀವಹಾನಿಯನ್ನೂ ಉಂಟು ಮಾಡುವ ಅಪಾಯವಿದೆ.

ಕಣ್ಣುಗಳ ಕ್ಯಾನ್ಸರ್ ಮಟ್ಟಿಗೆ ಪ್ರಪಂಚದಲ್ಲಿ ಪ್ರತಿವರ್ಷ ಅಂದಾಜು ಐದು ಸಾವಿರ ಹೊಸ ಪ್ರಕರಣಗಳು ದಾಖಲಾಗುತ್ತಿವೆ. ಇವುಗಳಲ್ಲಿ ಸುಮಾರು ಎರಡು ಸಾವಿರ ಪ್ರಕರಣಗಳು ನಮ್ಮ ದೇಶವೊಂದರಲ್ಲೇ ದಾಖಲಾಗುತ್ತಿವೆ ಎಂಬುದು ಆತಂಕದ ವಿಚಾರ.

'ಸಾಮಾನ್ಯವಾಗಿ ಒಂದರಿಂದ ಒಂದೂವರೆ ವರ್ಷದ ಮಕ್ಕಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಈ ರೀತಿಯ ಕಣ್ಣಿನ ಕ್ಯಾನ್ಸರ್ ಕಂಡುಬರುತ್ತಿದೆ. ಅಂದಾಜು ಹದಿನೈದು ಸಾವಿರ ಮಕ್ಕಳಲ್ಲಿ ಒಬ್ಬರಿಗೆ ರೆಟಿನೊಬ್ಲಾಸ್ಟೊಮಾ ಬರುವ ಸಾಧ್ಯತೆ ಇದೆ ಎಂಬುದು ವೈದ್ಯಲೋಕದ ಲೆಕ್ಕಾಚಾರ. ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ ಎರಡು ಸಾವಿರ ಪ್ರಕರಣಗಳು ಕಂಡುಬರುತ್ತವೆ' ಎನ್ನುತ್ತಾರೆ ಬೆಂಗಳೂರಿನ ನಾರಾಯಣ ನೇತ್ರಾಲಯದ ಅಧ್ಯಕ್ಷರಾದ ಡಾ. ಭುಜಂಗ ಶೆಟ್ಟಿ ಅವರು.